ಎಸ್.ಸಿ.ಸಂಖ್ಯೆಃ 497/2021
ಪ್ರಾ.ಸಾ-2

## ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ (ಸಿಸಿಹೆಚ್ -1) ರವರ ನ್ಯಾಯಾಂಗಣದಲ್ಲಿ

## ಎಸ್.ಸಿ. ಸಂಖ್ಯೆಃ 497/2021

ಚಾ.ಸಾ- 2 ಪ್ರಾ.ಸಾ- 2

ದಿಃ 22.05.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರು | ಆನಂದ |
| ತಂದೆ ಹೆಸರು | ನಾರಾಯಣ ಸ್ವಾಮಿ |
| ವಯಸ್ಸು | 36 ವರ್ಷ |
| ವೃತ್ತಿ | ಆಟೋ ಚಾಲಕ |
| ವಿಳಾಸ | ಹೆಬ್ಬಾಳ, ಬೆಂಗಳೂರು |

### ಮುಖ್ಯವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ

ಚಾ.ಸಾ-1 ನನ್ನ ತಾಯಿ. ಚಾ.ಸಾ-30 - ಹರೀಶ್ ನನ್ನ ತಮ್ಮ. ನನಗೆ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಗಳು ಸೇರಿದಂತೆ ಈ ಪ್ರಕರಣದ ಆರೋಪಿಗಳ ಪರಿಚಯ ಇಲ್ಲ.

2. ಸುಮಾರು 4 ವರ್ಷದ ಹಿಂದೆ ಸಂಕ್ರಾಂತಿ ಹಬ್ಬದ ದಿನದಂದು ರಾತ್ರಿ ಸುಮಾರು 11 ಗಂಟೆಗೆ ನನಗೆ ಕರೆ ಮಾಡಿ ನನ್ನ ತಮ್ಮ ಹರೀಶ್ ಗೆ ಯಾರೋ ಹೊಡೆದಿರುವುದಾಗಿ ಮತ್ತು ಆ ಬಗ್ಗೆ ಯಲಹಂಕದ ಸರ್ಕಾರಿ ಆಸ್ಪತ್ರೆಗೆ ಬರುವಂತೆ ತಿಳಿಸಿದ್ದರು. ಅದರಂತೆ ನಾನು ಅಲ್ಲಿಗೆ ಹೋದಾಗ ಪೋಲೀಸರು ನನಗೆ ಯಲಹಂಕ ನ್ಯೂ ಟೌನ್ ನಲ್ಲಿನ ನವಚೈತನ್ಯ ಆಸ್ಪತ್ರೆ ಬಳಿ ಬರುವಂತೆ ತಿಳಿಸಿದ್ದರು. ಅದರಂತೆ ನಾನು ನವಚೈತನ್ಯ ಆಸ್ಪತ್ರೆಗೆ ಹೋದಾಗ ಅಲ್ಲಿ ನನ್ನ ತಮ್ಮನನ್ನು ಚಿಕಿತ್ಸೆಗಾಗಿ ದಾಖಲು ಮಾಡಿರುವುದು ಕಂಡುಬಂದಿತ್ತು. ಬಳಿಕ ನಾವು ನನ್ನ ತಮ್ಮನನ್ನು

ಚಿಕಿತ್ಸೆಗಾಗಿ ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು.

3. ಆ ಸಂದರ್ಭದಲ್ಲಿ ನನ್ನ ತಮ್ಮನ ತಲೆಗೆ ಮತ್ತು ಬಲ ಕೈಗೆ ತೀವ್ರ ಸ್ವರೂಪದ ಗಾಯಗಳು ಆಗಿತ್ತು. ನನ್ನ ತಮ್ಮನು ಸುಮಾರು ಒಂದುವರೆ ತಿಂಗಳ ಕಾಲ ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ಐಸಿಯು ನಲ್ಲಿ ಇದ್ದನು. ನಂತರ ಆತನು ಸದರಿ ಆಸ್ಪತ್ರೆಯಲ್ಲಿ ಒಂದುವರೆ ತಿಂಗಳ ಕಾಲ ಒಳರೋಗಿಯಾಗಿ ಚಿಕಿತ್ಸೆಯನ್ನು ಪಡೆದಿದ್ದನು. ನನ್ನ ತಮ್ಮನ ಮೇಲೆ ಯಾರು ಹಲ್ಲೆ ಮಾಡಿದ್ದರು ಎಂದು ನನಗೆ ಗೊತ್ತಾಗಿರಲಿಲ್ಲ. ನನ್ನ ತಮ್ಮನ ಮೇಲೆ ಹಲ್ಲೆ ಮಾಡಿದ್ದ ವ್ಯಕ್ತಿಗಳ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರಲಿಲ್ಲ.

4. ಈಗ ನನಗೆ ತೋರಿಸಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿಗೆ ತೋರಿಸಿದ ದಾಖಲೆಯನ್ನು ನಿ.ಪಿ-2 ಎಂದು ಗುರುತಿಸಲಾಯಿತು. ಇದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ನಾನು ಎಲ್ಲಿ ಮತ್ತು ಯಾವ ವಿಚಾರವಾಗಿ ಈ ದಾಖಲೆಗೆ ಸಹಿ ಮಾಡಿದ್ದೆ ಎಂದು ನನಗೆ ನೆನಪಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಸ್ವತ್ತನ್ನು ಹಾಜರುಪಡಿಸಿರಲಿಲ್ಲ.

ಈ ಹಂತದಲ್ಲಿ ಮಾನ್ಯ ಮುಖ್ಯ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯ ಹೇಳಿಕೆ ಹಾಗು ಕಡತದಲ್ಲಿನ ದಾಖಲೆಗಳನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ.

<u>ಪಾಟಿಸವಾಲುಃ ಮಾನ್ಯ ಅಭಿಯೋಜಕರಿಂದಃ</u>

5. ಈ ಪ್ರಕರಣದ ಆರೋಪಿಗಳು ಹಳೆಯ ದ್ವೇಷದಿಂದ ಸಂಬಂಧಿತ ದಿನದಂದು ನನ್ನ ತಮ್ಮನ ಮೇಲೆ ಹಲ್ಲೆ ಮಾಡಿದ್ದರು ಎನ್ನುವ ವಿಚಾರ ನನಗೆ ತಿಳಿದುಬಂದಿತ್ತು ಎಂದರೆ ಸರಿಯಲ್ಲ. ನಾನು ಸದರಿ ವಿಚಾರವಾಗಿ ಮತ್ತು ಆರೋಪಿಗಳನ್ನು ಗುರುತಿಸುವುದಾಗಿ ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿದ್ದೆ ಎಂದರೆ ಸರಿಯಲ್ಲ. ನಾನು ದಿಃ 20.1.2021 ರಂದು ತನಿಖಾಧಿಕಾರಿಯವರ ಮುಂದೆ ನೀಡಿದ್ದ ಹೇಳಿಕೆಯಲ್ಲಿ "ರಂಜಿತ್ ರಾವ್ ಮತ್ತು … … … … ಗುರುತಿಸುತ್ತೇನೆ." ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಭಾಗದ ಹೇಳಿಕೆಯನ್ನು ನಿ.ಪಿ-3 ಎಂದು ಗುರುತಿಸಲಾಯಿತು.

ಎಸ್.ಸಿ.ಸಂಖ್ಯೆಃ 497/2021
ಫ್ರಾ.ಸಾ-2

6. ಘಟನೆ ಕಾಲದಲ್ಲಿ ನನ್ನ ತಮ್ಮನು ಧರಿಸಿದ್ದ ಬಟ್ಟೆಗಳನ್ನು ನಾನು ದಿಃ 25.2.2021 ರಂದು ಠಾಣೆಯಲ್ಲಿ ಪೋಲೀಸರ ಮುಂದೆ ಹಾಜರುಪಡಿಸಿದ್ದೆ ಮತ್ತು ಸದರಿ ಬಟ್ಟೆಗಳಿಗೆ ರಕ್ತದ ಕಲೆ ಆಗಿತ್ತು ಎಂದರೆ ಸರಿಯಲ್ಲ. ಪೋಲೀಸರು ನನ್ನ ಮತ್ತು ಪಂಚರ ಸಮಕ್ಷಮ ನಿ.ಪಿ-2 ರಂತೆ ಮಹಜರ್ ಮಾಡಿ ಸದರಿ ಬಟ್ಟೆಗಳನ್ನು ಅಮಾನತುಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಸದರಿ ದಿನದಂದು ಆ ಬಟ್ಟೆಗಳನ್ನು ಹಾಜರುಪಡಿಸಿದ್ದ ಬಗ್ಗೆ ತನಿಖಾಧಿಕಾರಿಯವರ ಮುಂದೆ ಹೇಳಿಕೆಯನ್ನು ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ನನ್ನ ಹೇಳಿಕೆಯಲ್ಲಿ " ನನ್ನ ತಮ್ಮನ ಮೇಲೆ ... .... .... ... ಸಹಿ ಮಾಡಿರುತ್ತೇನೆ." ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಈ ಭಾಗದ ಹೇಳಿಕೆಯನ್ನು ನಿ.ಪಿ-4 ಎಂದು ಗುರುತಿಸಲಾಯಿತು.

ಆರೋಪಿಗಳ ಪರ ವಕೀಲರು ತಮ್ಮ ಪರ ಪಾಟಿಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಮುರಲಿಧರ ಪೈ ಬಿ.)
ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.